ಶ್ರೀ ಎಸ್. ರಮೇಶ್ (ಕನ್ನಡ ಮತ್ತು ಸಂಸ್ಕೃತಿ ಖಾತೆ ಸಚಿವರು):- ಆದರ ಬಗ್ಗೆ ಪ್ರಶ್ನೆ ಇಲ್ಲ. ಅಧ್ಯಕ್ಷರು ರೂಲಿಂಗ್ ಕೊಟ್ಟಿದ್ದಾರೆ. ಪ್ರಶ್ನೋತ್ತರ ನಡೆಯಲಿ ಎಂದು ಹೇಳಿದ್ದಾರೆ. ನೀವು ಎತ್ತಿರುವ ಪ್ರಶ್ನೆ ಮುಖ್ಯವೋ ಅಧ್ಯಕ್ಷರ ರೂಲಿಂಗ್ ಮುಖ್ಯವೋ.

(ಗೊಂದಲ)

ಪ್ರೊ.ಎಂ.ಡಿ. ನಂಜುಂಡಸ್ವಾಮಿ:- ಅಲ್ಲಿಗೇ ಬರುತ್ತಿದ್ದೇನೆ. ತಾವು ಏತಕ್ಕೆ ಅವಸರ ಬೀಳುತ್ತಿದ್ದೀರಿ. ಪ್ರಶ್ನೋತ್ತರ ಎಂದರೆ ಏನು it is an official business. Is it not?

(ಗೊಂದಲ)

ಶ್ರೀ ಆರ್.ಎನ್. ನಾಯಕ್:- ಒಂದು ಸಲ ಒಬ್ಬರಿಗೆ ರೂಲಿಂಗ್ ಕೊಟ್ಟಮೇಲೆ ಅದು ಎಲ್ಲರಿಗೂ ಅಪ್ಲೈ ಆಗುತ್ತದೆಯೋ ಆಗುವುದಿಲ್ಲವೋ? ವಿರೋಧ ಪಕ್ಷದ ನಾಯಕರು ಒಂದು ಅಭಿಪ್ರಾಯ ಮಂಡಿಸಿದರು, ಆದರ ಮೇಲೆ ರೂಲಿಂಗ್ ಬಂತು ಅದು ಎಲ್ಲರಿಗೂ ಅಪ್ಲೈ ಆಗುತ್ತದೆಯೇ ಇಲ್ಲ ಕೆಲವರಿಗೆ ಅಪ್ಲೈ ಆಗುವುದಿಲ್ಲವೋ ಎಂಬುದನ್ನು ತಾವೇ ಹೇಳಬೇಕು ಅಧ್ಯಕ್ಷರೇ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ:- ಇಲ್ಲಿ ಅರ್ಥಪೂರ್ಣವಾದ ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲ ಎಂದು ಕಾಣುತ್ತದೆ ಅಧ್ಯಕ್ಷರೆ.

ಶ್ರೀ ಕೆ. ಹರ್ಷಕುಮಾರ್ ಗೌಡ:- ಪ್ರೊಫೆಸರ್‌ರವರೇ I have got highest regards to you.

ಇಡೀ ಸದನ ಅಧ್ಯಕ್ಷರ ರೂಲಿಂಗ್‌ನ್ನು ಪಾಲಿಸಬೇಕು.

ಪ್ರೊ. ಎಂ.ಡಿ. ನಂಜುಂಡಸ್ವಾಮಿ:- ಸಂಪ್ರದಾಯದ ಬಗ್ಗೆ ಗೌರವ ಬೆಳೆಸಿಕೊಳ್ಳಿ.

ಶ್ರೀ ಕೆ. ಹರ್ಷಕುಮಾರ್ ಗೌಡ:- ಅಧ್ಯಕ್ಷರೇ ತಾವು ಕೇಳಬೇಕಾಗುತ್ತದೆ. ಇಲ್ಲಿ ಒಬ್ಬೊಬ್ಬರು ಒಂದೊಂದು ತರಹ ಹೇಳುವುದಲ್ಲ, ಅಧ್ಯಕ್ಷರ ರೂಲಿಂಗನ್ನು ಎಲ್ಲರೂ ಪಾಲಿಸಬೇಕು

(ಗೊಂದಲ)

ಪ್ರೊ. ಎಂ.ಡಿ. ನಂಜುಂಡಸ್ವಾಮಿ:- ಯಾರಾದರೂ ಮಾತನಾಡುವಾಗ ನಾನು ಮಧ್ಯೆ ಮಾತನಾಡಿರುತ್ತೇನೆಯೇ? ನಾನು ನಿಮಗೆಲ್ಲಾ ಎಷ್ಟು ಗೌರವ ಕೋಡುತ್ತೇನೋ ಅಷ್ಟೇ ಗೌರವ ತಾವೂ ಕೊಡಬೇಕು.

(ಗೊಂದಲ)

ಅಧ್ಯಕ್ಷರು:- ಕರಿಯಣ್ಣನವರೇ, ಪರಿಸ್ಥಿತಿಯ ಸೂಕ್ಷ್ಮತೆಯನ್ನು ನೀವು ಗಮನಿಸದೇ ಹೋದರೆ.....

ಪ್ರೊ. ಎಂ.ಡಿ. ನಂಜುಂಡಸ್ವಾಮಿ:- ಸಭಾಧ್ಯಕ್ಷರೇ, ತಮ್ಮ ಮೂಲಕ ಇನ್ನೊಂದು ವಿನಂತಿ ಮಾಡಿಕೊಳ್ಳಬೇಕು. ನಾನು ಇವರುಗಳಿಗೆ ಎಷ್ಟು ಗೌರವ ಕೊಡುತ್ತೇನೆಯೋ ಅವರು ಮಾತನಾಡುವಾಗ, ಆ ಗೌರವವನ್ನು ಇವರೂ ನನಗೆ ಕೊಡಬೇಕೋ ಬೇಡವೋ? ಅಷ್ಟೊಂದು ಕನಿಷ್ಠ ನಡತೆ ಇಲ್ಲದಿದ್ದರೆ ಸದನದ ಗೌರವವನ್ನು ಹೇಗೆ ಕಾಪಾಡುತ್ತಾರೋ ನನಗೆ ಗೋತ್ತಾಗುವುದಿಲ್ಲ, ಅಲ್ಲಿಗೇ ಬರುತ್ತಿದ್ದೇನೆ. ಪ್ರಶ್ನೋತ್ತರಕ್ಕೇ ಬರುತ್ತಿದ್ದೇನೆ. ಪ್ರಶ್ನೋತ್ತರವನ್ನು ನಾವು ಆಫಿಷಿಯಲ್ ಬಿಸಿನೆಸ್ ಎಂದು ಕರೆಯುತ್ತೇವೆ. ತಮ್ಮ ಹೇಳಿಕೆಯಿಂದಲೇ ನಾನು ಮುಂದುವರಿಯುತ್ತೇನೆ. There is a prima facie case of leakage. There is violation of the Official Secrets Act and violation of the oath of secrecy... ಅಲ್ಲಿಗೆ ಈ ಸಹಕಾರ ಮುಂದುವರಿಯುವುದಕ್ಕೆ ಇರುವಂತಹ ನೈತಿಕ ಹಕ್ಕನ್ನು ಕೇಳುತ್ತಿಲ್ಲ, ಕಾನೂನಿನ ಅಡಿಯಲ್ಲಿಯೇ ಆ ಹಕ್ಕು ಕಳೆದುಕೊಂಡಿದೆ. It is not that the Finance Minister who happens to be the Chief Minister should resign. The entire Government should resign if you have any morality left in you. That is why I am walking out ever before the Question Hour, because these Ministers have lost moral right.. to continue...

ನಮಸ್ಕಾರ.

(ರೈತ ಸಂಘದ ಸದಸ್ಯರಾದ ಪ್ರೊ. ಎಂ.ಡಿ. ನಂಜುಂಡಸ್ವಾಮಿ ಮತ್ತು ಶ್ರೀ ಬಾಬಾಗೌಡ ಪಾಟೀಲ್ ಅವರುಗಳು ಸಭಾತ್ಯಾಗ ಮಾಡಿದರು)